**OS-383/2017 P.W.2**

ದಿನಾಂಕ 11.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಪಾಟೀ ಸವಾಲು ಃ**</u> ಪ್ರತಿವಾದಿಯ ಪರ ವಕೀಲರಿಂದ ಃ-

ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿವೇಶನದ ಬಗ್ಗೆ ಈ ದಾವೆಯನ್ನು ಹಾಕಿರುತ್ತಾರೆ. ದಾವಾ ಆಸ್ತಿಯ ಸರ್ವೇ ನಂಬರ್ 6. ಸರ್ವೇ ನಂಬರ್ 6 ರಲ್ಲಿ ಎಷ್ಟು ಎಕರೆ ಜಮೀನು ಬರುತ್ತದೆಂಬ ನನಗೆ ಮಾಹಿತಿ ಇಲ್ಲ. ವಾದಿಯ ಆಸ್ತಿಯ ಅಸೆಸ್ಮಂಟ್ ನಂಬರ್ ನನಗೆ ಗೊತ್ತಿಲ್ಲ.ನನ್ನ ಆಸ್ತಿಯ ಅಸೆಸ್ಮಂಟ್ ನಂಬರ್ 855. ಅದರ ಅಳತೆ 40 x 60 ಅಡಿ. ಸದರಿ ಆಸ್ತಿಗೆ ಸಂಬಂಧಪಟ್ಟ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ವಾದಿ ಮತ್ತು ಪ್ರತಿವಾದಿ ಅಕ್ಕ ತಂಗಿಯರು ಎಂದರೆ ಸರಿ. ವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕು ಪತ್ರವನ್ನು ನಿಡೀರುತ್ತಾರೆ ಅದನ್ನು ನಾನು ನೋಡಿರುತ್ತೇನೆ. ನಾನು ಬಾವಿಕೆರೆ ವಾಸಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ. ನನ್ನ ಆಸ್ತಿಯು 2017 ರಲ್ಲಿ ನನಗೆ ಮಂಜೂರಾಗಿದೆ. ನನಗೆ ದಾವಾ ಅಸ್ತಿಯ ಚಕ್ಕುಬಂದಿ ಗೊತ್ತು ಆದರೆ ನನಗೆ ಯಾವ ದಿಕ್ಕಿಗೆ ಯಾರು ಬರುತ್ತಾರೆಂದು ದಿಕ್ಕಿನನ್ವಯ ಹೇಳಲು ಬರುವುದಿಲ್ಲ. ವಾದಿ ಪ್ರತಿವಾದಿಯರ ಗಂಡಂದಿರು ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ವಾದಿ ಪ್ರತಿವಾದಿಯ ತಂದೆಯ ಮೂಲ ಊರು ಬಾವಿಕೆರೆ ಎಂದರೆ ಸರಿಯಲ್ಲ. ಸದರಿಯವರ ತಂದೆ ಬೋರೆಗೌಡರಿಗೆ ಇಬ್ಬರು ಗಂಡು ಮಕ್ಕಳು. ಬೋರೆಗೌಡರ ಮಕ್ಕಳಿಗೆ ವಾದಿ ಮತ್ತು ಪ್ರತಿವಾದಿಯರನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬೋರೆಗೌಡ ವಾದಿಯ ಗಂಡನ ಹೆಸರು. ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ಬೋರೆಗೌಡ ಜೀವಂತವಾಗಿರುತ್ತಾರೆ. ಪ್ರತಿವಾದಿಗೆ ಸಹ ಸರ್ವೇ ನಂಬರ್ 6 ರಲ್ಲಿ ಮಂಜೂರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಗೆ ಆಸ್ತಿ ಮಂಜೂರಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ. ವಾದಿಗೆ ಅನುಕೂಲ ಮಾಡಿಕೊಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**OS-383/2017 P.W.2**

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

**OS-383/2017 P.W.2**

ದಿನಾಂಕ 11.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಪಾಟೀ ಸವಾಲು ಃ**</u> ಪ್ರತಿವಾದಿಯ ಪರ ವಕೀಲರಿಂದ ಃ-

ನಾನು ಬಾವಿಕೆರೆ ಕೋರೆಯಲ್ಲಿ ವಾಸವಿರುತ್ತೇನೆ. ನಾನು ಮದುವೆಯಾದಾಗಿನಿಂದ ಅಲ್ಲಿಯೇ ವಾಸವಾಗಿರುತ್ತೇನೆ. ವಾದಿ ನನ್ನ ಸಂಬಂಧಿಕರಲ್ಲ. ವಾದಿ ಮತ್ತು ಪ್ರತಿವಾದಿಯರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ ಆದರೆ ವಾದಿ ಅಲ್ಲಿ ಬಂದು ಸೇರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ಆಸ್ತಿ ಮಂಜೂರಾಗಿಲ್ಲ. ನನ್ನ ಮತ್ತು ವಾದಿಯ ಆಸ್ತಿಗಳ ನಡುವೆ ಒಂದು ಬೀದಿ ಅಂತರ ಇದೆ.ವಾದಿ ಪ್ರತಿವಾದಿಯರ ನಡುವೆ ಆಗಾಗ ಗಲಾಟೆ ನಡೆಯುತ್ತಿದೆ ಎಂದರೆ ಸರಿ. ಇಬ್ಬರೂ ಸಹ ಒಬ್ಬರ ವಿರುದ್ದ ಇನ್ನೊಬ್ಬರು ದೂರುಗಳನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಸಹ ಅಲ್ಲಿ ನಿವೇಶನ ಇದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನುನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

**OS-383/2017 P.W.2**

ದಿನಾಂಕ 11.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು :</u>** ಪ್ರತಿವಾದಿಯ ಪರ ವಕೀಲರಿಂದ :-

ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ತಂದೆಯ ಕಾಲದಿಂದ ನಾನು ಬಾವಿಕೆರೆಯಲ್ಲಿ ವಾಸವಿರುತ್ತೇನೆ. ನನಗೆ ಬಾವಿಕೆರೆ ಗ್ರಾಮದಲ್ಲಿ ನಿವೇಶನ ಮಂಜೂರು ಮಾಡಿರುತ್ತಾರೆ. ನನಗೆ ಸದರಿ ನಿವೇಶನದ ಅಸೆಸ್ಮಂಟ್ ನಂಬರ್ ಗೊತ್ತಿಲ್ಲ. ಆದರೆ ಸರ್ವೇ ನಂಬರ್ 6. ಸದರಿ ಜಮೀನಿನಲ್ಲಿ 25-30 ಜನರಿಗೆ ಮಂಜೂರಿ ಮಾಡಿರುತ್ತಾರೆ. ಅದರಲ್ಲಿ ಕೆಲವರು ಮನೆ ಕಟ್ಟಿದ್ದು ಕೆಲವರು ಖಾಲಿ ಬಿಟ್ಟಿರುತ್ತಾರೆಂದರೆ ಸರಿ. ಪ್ರತಿವಾದಿಗೆ ಸಹ ಸದರಿ ಜಮೀನಿನಲ್ಲಿ ನಿವೇಶನ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹಾಕಿರುತ್ತಾರೆ. ನನ್ನ ಆಸ್ತಿ ಮತ್ತು ದಾವಾ ಆಸ್ತಿಯ ನಡುವೆ 150 ಮೀಟರ್ ಅಂತರ ಇದೆ. ವಾದಿ ಪ್ರತಿವಾದಿಯರ ನಡುವೆ ಗಲಾಟೆಯಾಗಿ ಇಬ್ಬರು ಪೊಲೀಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಬಾವಿಕೆರೆಯಲ್ಲಿ ಜಮೀನುಇದೆ. ನನಗೆ ಮಂಜೂರಿಯಾದ ನಿವೇಶನದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಬಾವಿಕೆರೆಯಲ್ಲಿ ವಾಸವಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನುನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

**OS-383/2017 P.W.2**

ದಿನಾಂಕ 11.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u>** <u>:</u> ಪ್ರತಿವಾದಿಯ ಪರ ವಕೀಲರಿಂದ :-

ನಾನು 7 ನೇ ತರಗತಿ ಓದಿರುತ್ತೇನೆ. ನಾನು ಬಾವಿಕೆರೆ ವಾಸಿ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಈ ದಾವೆಯನ್ನು ಹಾಕಿರುತ್ತಾರೆ. ನನಗೆ ಮಂಜೂರಾದ ಆಸ್ತಿಯ ಅಸೆಸ್ಮಂಟ್ ನಂಬರ್ ಗೊತ್ತಿಲ್ಲ. ಆದರೆ ಸರ್ವೇ ನಂಬರ್ 6. ಸರ್ವೇ ನಂಬರ್ 6 ರಲ್ಲಿ ಒಟ್ಟು 20 ಜನರಿಗೆ ನಿವೇಶನ ಮಂಜೂರಿ ಮಾಡಿರುತ್ತಾರೆ. ಅದೇ ರೀತಿ ಪ್ರತಿವಾದಿಗೂ ಸಹ ಅಲ್ಲಿ ನಿವೇಶನ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಆಸ್ತಿಯ ಹಾಗೂ ದಾವಾ ಆಸ್ತಿಯ ನಡುವೆ ಸ್ವಲ್ಪ ದೂರ ಇದೆ. ನನ್ನ ಆಸ್ತಿಯ ಪೂರ್ವಕ್ಕೆ ಬಸವರಾಜಪ್ಪನ ಮನೆ, ಪಶ್ಚಿಮಕ್ಕೆ ಚಿಕ್ಕಚನ್ನಪ್ಪ ರವರ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಬರುತ್ತದೆ. ನನ್ನ ಆಸ್ತಿಗೆ ಸಬಂಧಪಟ್ಟ ಯಾವುದೇ ದಾಖಲೆ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಆಗಾಗ ಗಲಾಟೆ ನಡೆಯುತ್ತಿದೆ ಎಂದರೆ ಸರಿ. ಅದೇ ರೀತಿ ಲಕ್ಕವಳ್ಳಿ ಪೋಲೀಸ್ ಠಾಣೆಗೆ ಇಬ್ಬರೂ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನುನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.